**ಎಸ್.ಸಿ. ನಂ.10/2019**

**ದೋ.ಸಾ. :47 ಪ್ರಾ.ಸಾ. : 39**

ಸಾಕ್ಷಿಯ ಹೆಸರು : ಮಂಜುನಾಥ ಗೊಯ್ಡು ಗೊಂಡಾ

**ದಿನಾಂಕಃ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ.ಎಲ್.ಎಸ್.ಕೆ ವಕೀಲರಿಂದಃ-**

12. ಶವಪರೀಕ್ಷಾ ನಂತರ ಶವವನ್ನು ಮೃತನ ಅಣ್ಣನಿಗೆ ಹಸ್ತಾಂತರಿಸಿದಾಗ ಸುಮಾರು ಮಧ್ಯಾಹ್ನ 2.45 ಗಂಟೆಯಾಗಿರುತ್ತದೆ. ಶವವನ್ನು ಹಸ್ತಾಂತರಿಸಿದ ನಂತರ ನಾವು ಬರುವವರೆಗೆ ಶವವು ನಮ್ಮ ಜೊತೆಯಲ್ಲಿಯೇ ಇತ್ತು. ಶವ ಪರೀಕ್ಷೆಯ ನಂತರ ವೈದ್ಯರು ಎಷ್ಟು ಗಂಟೆಗೆ ಹೋದರು ಎಂದು ನನಗೆ ಗೊತ್ತಿಲ್ಲ. ಶವ ಪರೀಕ್ಷೆಯ ಮೃತ ದೇಹದಿಂದ ಸಂಗ್ರಹಿಸಿದ ವಿಸೇರಾ ಮತ್ತು ಇತರ ಭಾಗಗಳನ್ನು ವೈದ್ಯರು ತಮ್ಮೊಂದಿಗೆ ತೆಗೆದುಕೊಂಡು ಹೋಗಿರುತ್ತಾರೆ. ಶವ ಪಂಚನಾಮೆಯನ್ನು ಒಮ್ಮೆಗೇ ಬರೆಯಲಾಗಿತ್ತು. ಶವ ಪಂಚನಾಮೆಯನ್ನು ಬರೆದ ನಂತರ ಬರೆದವರ ಹಾಗೂ ತನಿಖಾಧಿಕಾರಿಯ ಸಹಿ ಕೊನೆಯ ಪುಟದಲ್ಲಿರುತ್ತದೆ ಹಾಗೂ ಪಂಚರ ಸಹಿ ಮಧ್ಯದಲ್ಲಿರುತ್ತದೆ. ನಾವು ಶವವನ್ನು ನೋಡಿದಾಗ, ಶವದ ಮುಖದ ಭಾಗದಲ್ಲಿ ಹಾಗೂ ಹೊಟ್ಟೆಯ ಭಾಗದಲ್ಲಿ ಹುಳುಗಳು ಇದ್ದವು. ದಿ.26-10-2018 ರಂದು ನಾನು ತನಿಖಾಧಿಕಾರಿಗೆ ಸಹಾಯ ಮಾಡಿದಾಗ ನಾವು ಪೊಲೀಸ್ ಸಿಬ್ಬಂದಿಗಳು 7-8 ಜನರು ಇದ್ದೆವು. ಸದರಿ ದಿನದಂದು ನಾವು ತನಿಖಾಧಿಕಾರಿಗಳೊಂದಿಗೆ ಹೋಗಿರುತ್ತೇವೆ. ವಾಪಾಸು ಠಾಣೆಗೆ ಬಂದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ. ನಾನು ತನಿಖೆಗೆ ಸಹಾಯ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

13. ದಿ.31-10-2018 ರಂದು ಶವಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿದ ವಸ್ತುಗಳನ್ನು ತರಲು ಹೋದಾಗ 11.00 ಗಂಟೆಯಾಗಿದ್ದು, ಮರಳಿ ಠಾಣೆಗೆ ಬಂದಾಗ 12.00 ಗಂಟೆಯಾಗಿರುತ್ತದೆ. ಎಷ್ಟು ವಸ್ತುಗಳಿದ್ದವು ಎಂದರೆ ಸಾಕ್ಷಿಯು, 9 ವಸ್ತುಗಳಿದ್ದು ಅವುಗಳು ಸೀಲಾದ ಕಾರಣ, ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವೈದ್ಯರ ಬಳಿ ಹೋಗಿಲ್ಲ ಹಾಗೂ ಯಾವುದೇ ವಸ್ತುಗಳನ್ನು ತಂದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

14. 1 ನೇ ಆರೋಪಿಯನ್ನು ನಮ್ಮ ಪೊಲೀಸರು ಯಾವಾಗ ವಶಕ್ಕೆ ಪಡೆದರು ಎಂದು ನನಗೆ ಗೊತ್ತಿಲ್ಲ ಹಾಗೂ ಆನಂತರ ನಾನು ತನಿಖೆಗೆ ಸಹಾಯ ಮಾಡುವವರೆಗೆ ನಮ್ಮ ಪೊಲೀಸರು ಏನೆಲ್ಲಾ ತನಿಖೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಸ್ಥಳಕ್ಕೆ ಲ್ಯಾಪ್ ಟಾಪ್ ಹಾಗೂ ಪ್ರಿಂಟರ್ ನ್ನು ತೆಗೆದುಕೊಂಡು ಹೋದ ಬಗ್ಗೆ ಠಾಣೆಯ ಮೂವ್‌ಮೆಂಟ್ ರಿಜಿಸ್ಟರಿನಲ್ಲಿ ನಮೂದಿಸಿಲ್ಲ. ನಾನು ತನಿಖೆಗೆ ಸಹಾಯಕನಾಗಿ ಹೋದ ಬಗ್ಗೆ ಠಾಣೆಯ ಡೈರಿಯಲ್ಲಿ ನಮೂದಿಸಲಾಗಿರತ್ತದೆ. ಸದರಿ ನಮೂದಿನ ಬಗ್ಗೆ ನನಗೆ ಈಗ ಹೇಳಲು ಬರುವುದಿಲ್ಲ. ನಿಪಿ–60 ಮತ್ತು 61 ಫೋಟೊದಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ನಮ್ಮ ವಾಹನದಲ್ಲಿ ಬಂದಿರುತ್ತಾರೆ. ಸ್ಥಳದಲ್ಲಿದ್ದ ವ್ಯಕ್ತಿಗಳ ಜೊತೆ ತನಿಖಾಧಿಕಾರಿಗಳು ಮಾಡಿದ್ದು, ಆದರೆ ಏನು ವಿಚಾರಣೆ ಮಾಡಿದರು ಎಂದು ನನಗೆ ಗೊತ್ತಿಲ್ಲ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ